# ಮಕ್ಕಳಿಗೆ ಸಾಹಿತ್ಯದ ಮಾರ್ಗದರ್ಶನ ಅಗತ್ಯ



**ಧಾರವಾಡ:** ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಾಹಿತ್ಯ ಪೂರಕ. ಸಮಾಜದಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬುದ್ಧಿಮಾತು ಹೇಳುವ ಬದಲು ಸಾಹಿತ್ಯದ ಮಾರ್ಗದರ್ಶನ ಮಾಡಬೇಕು ಎಂದು ಆಕಾಶವಾಣಿ ನಿವೃತ್ತ ಅಧಿಕಾರಿ ಡಾ.ಬಸು ಬೇವಿನಗಿಡದ ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ನಗರದ ಕೆ.ಇ.ಬೋರ್ಡ್ ಸಂಸ್ಥೆಯ ಭವನದಲ್ಲಿ ಹಮ್ಮಿಕೊಂಡ 'ಬಾಲ ಸಾಹಿತಿ' ಕಾರ್ಯಕ್ರಮದಲ್ಲಿ ಮಾತನಾಡಿ, ಸಾಹಿತ್ಯದ ಸ್ವಾರಸ್ಯಕರ ಸಂಗತಿ, ಭಾಷೆಯ ಅರಿವು, ಸೌಂದರ್ಯ ಮಕ್ಕಳಿಗೆ ಕಲಿಸಬೇಕಿದೆ ಎಂದರು.

ಮಕ್ಕಳು ಉತ್ತಮ ಸಾಹಿತ್ಯ ಕೃತಿಗಳು ಓದುವ ಜೊತೆ ಸಂಸ್ಕೃತಿಯ ಅರಿವು ಹೆಚ್ಚಿಸಿಕೊಳ್ಳಬೇಕು. ಸಮಕಾಲಿನ ಬದುಕಿನಲ್ಲಿ ಒಳ್ಳೆಯ ಅಂಶಗಳು ಗಣನೆಗೆ ತೆಗೆದುಕೊಂಡು, ಮಕ್ಕಳ ಸಣ್ಣಪುಟ್ಟ ಸಾಧನೆಗೆ ಪ್ರೋತ್ಸಾಹಿಸುವಂತೆ ಸಲಹೆ ನೀಡಿದರು.

ಸಾಹಿತಿ ಸುನಂದಾ ಕಡಮೆ ಮಾತನಾಡಿ, ಮಕ್ಕಳ ಹಕ್ಕು, ಸುರಕ್ಷತೆ, ಸವಲತ್ತು, ಕಾನೂನು ಬಗ್ಗೆ ತಿಳಿಯುವುದು ಅಗತ್ಯವಿದೆ. ಶಿಕ್ಷಕರು ಮಕ್ಕಳಿಗೆ ಸಾಹಿತ್ಯ ಕೃತಿಗಳು ಓದಲು ಪ್ರೇರೇಪಿಸುವಂತೆ ಹೇಳಿದರು.

ಭವಿಷ್ಯದ ಬಗ್ಗೆ ಮಕ್ಕಳಿಗೆ ಸಕಾರಾತ್ಮಕ ಚಿಂತಿಸಲು ಕಲಿಸಬೇಕು. ಯಾವುದೇ ಸಾಹಿತ್ಯ ಮನುಷ್ಯನ ತಿಳುವಳಿಕೆ ಹೆಚ್ಚಿಸುವುದೋ, ಅಂತಹ ಸಾಹಿತ್ಯ ಕಲಿಕೆ ಅಗತ್ಯವಿದೆ. ಬಾಲ್ಯದಲ್ಲಿ ಮಕ್ಕಳಿಗೆ ಸಾಹಿತ್ಯ ಕೃತಿ ಬಗ್ಗೆ ಒಲವು ಮೂಡಿಸಲು ತಿಳಿಸಿದರು.

ಅನಿಸಿಕೆ ಹಂಚಿಕೊಂಡ ಬಾಲ ಸಾಹಿತಿಗಳಾದ ನೇಹಾ ರಾಮಾಪುರ ಹಾಗೂ ವಿದ್ಯಾ ಭಗವತಿ, ತಮ್ಮ ಸಾಹಿತ್ಯದ ಬರವಣಿಗೆಗೆ ಪ್ರೇರಣೆ, ಸಾಗಿಬಂದ ದಾರಿ, ಸಮಾಜದಿಂದ ದೊರೆತ ಸ್ಪಂದನೆ, ಭವಿಷ್ಯದ ಭರವಣಿಗೆ ಬಗ್ಗೆ ಅಭಿಲಾಷೆಗಳು ವ್ಯಕ್ತಪಡಿಸಿದರು.

ವಿಶ್ರಾಂತ ನ್ಯಾಯಾಧೀಶ ಎನ್.ಎಸ್. ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಕೆ.ಇ. ಬೋರ್ಡ್ ಕಾರ್ಯದರ್ಶಿ ಡಿ.ಎಸ್.ರಾಜ ಪುರೋಹಿತ, ಡಾ.ಆನಂದ ಪಾಟೀಲ, ಡಾ.ಶರಣಮ್ಮ ಗೋರೆಬಾಳ, ಡಾ.ಚೆನ್ನಪ್ಪ ಅಂಗಡಿ, ಪ್ರಕಾಶ ಕಡಮೆ ಇದ್ದರು.